2019 ಕ.ತೀ.ವ 658

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ಎಸ್. ಸುಜಾತಾ

ದಾಲ್ಮಿಯಾ ಸಿಮೆಂಟ್ ವೆಂಚರ್ ನಿಯಮಿತ –ವಿರುದ್ಧ–
ಕರ್ನಾಟಕ ರಾಜ್ಯ ಪ್ರಧಾನ ಕಾರ್ಯದರ್ಶಿಯವರಿಂದ ಪ್ರತಿನಿಧಿತ,
ಕಂದಾಯ ಇಲಾಖೆ ಮತ್ತು ಇತರರು*

ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ 44(2)ನೇ ಪ್ರಕರಣ.

ಅರ್ಜಿದಾರರು ಪ್ರತ್ಯರ್ಜಿದಾರ ಇಲಾಖೆಯಲ್ಲಿ ತಮ್ಮ ಕಂಪನಿಗೆ ಕೆಲವು ಭೂಮಿಗಳನ್ನು ಖರೀದಿಸಿರುತ್ತಾರೆ. ಸದರಿ ಇಲಾಖೆಯಲ್ಲಿ ಆ ಭೂಮಿಗಳನ್ನು ನೋಂದಣಿ ಮಾಡಿಸಿರುತ್ತಾರೆ. ನೋಂದಣಿಯ ಸಮಯದಲ್ಲಿ ಶೇಕಡಾ 6.8ರ ದರದಲ್ಲಿ ನೋಂದಣಿ ಶುಲ್ಕವನ್ನು ಪಾವತಿಸಿರುತ್ತಾರೆ.

ಈ ನಡುವೆ ಸರ್ಕಾರವು ಗೆಜೆಟ್ ಅಧಿಸೂಚನೆಯ ಮೂಲಕ ನೋಂದಣಿ ಶುಲ್ಕವನ್ನು ಶೇಕಡಾ 5.8ದರಕ್ಕೆ ಇಳಿತಾಯ ಮಾಡಿರುತ್ತದೆ. ಈ ವಿಷಯ ತಿಳಿಯದೆ ಅರ್ಜಿದಾರರು ಹೆಚ್ಚಿಗೆ ನೋಂದಣಿ ಶುಲ್ಕವನ್ನು ಪಾವತಿಸಿರುತ್ತಾರೆ. ತದನಂತರದಲ್ಲಿ, ಅಧಿಸೂಚನೆಯ ಪ್ರಕಟವಾದ ದಿನಾಂಕದ ತರುವಾಯ ನೋಂದಣಿ ಮಾಡಿಸಿರುವುದರಿಂದ ಹೆಚ್ಚಿನ ನೋಂದಣಿ ಶುಲ್ಕವನ್ನು ಮರು ಪಾವತಿಸುವಂತೆ ಮನವಿ ಸಲ್ಲಿಸಿರುತ್ತಾರೆ. ಪ್ರತ್ಯರ್ಜಿದಾರರು ಹಿಂಬರಹದ ಮೂಲಕ ಅದನ್ನು ತಿರಸ್ಕರಿಸಿರುತ್ತಾರೆ. ಹಾಗಾಗಿ ಈ ರಿಟ್ ಅರ್ಜಿಯನ್ನು ಸಲ್ಲಿಸಲಾಗಿದೆ.

*ರಿಟ್ ಅರ್ಜಿ ಸಂ.104140/2013 (ಜಿಎಂ–ಎಸ್‌ಟಿ/ಆರ್‌ಎನ್), ದಿನಾಂಕ 22ನೇ ಆಗಸ್ಟ್, 2017.

10,11,810/-ರೂ.ಗಳವರೆಗೆ ಅರ್ಜಿದಾರರು ಸಂದಾಯ ಮಾಡಿದ ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ಒಪ್ಪಿಕೊಂಡು ಪ್ರತ್ಯರ್ಜಿದಾರ ಸಂಖ್ಯೆ:4, ದಿನಾಂಕ: 12.10.2012ರಂದು ಅರ್ಜಿದಾರರಿಗೆ ಪತ್ರ ಬರೆದು, ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರ ಅಂದರೆ ಇಲ್ಲಿನ ಪ್ರತ್ಯರ್ಜಿದಾರ ಸಂಖ್ಯೆ 2ರಲ್ಲಿ ಪೂರ್ವ ಮಂಜೂರಾತಿಯ ಪಡೆದ ನಂತರವಷ್ಟೇ ಹಣ ಹಿಂದಿರುಗಿಸಲು ಸಾಧ್ಯವೆಂದು ತಿಳಿಸಿ, ಅರ್ಜಿದಾರರಿಗೆ ಈ ಸಂಬಂಧದಲ್ಲಿನ ಆವಶ್ಯಕ ಕಾರ್ಯವಿಧಾನಕ್ಕೆ ಬೆಂಗಳೂರಿನಲ್ಲಿರುವ ಕೇಂದ್ರ ಕಚೇರಿಯನ್ನು ಸಂಪರ್ಕಿಸಲು ಕೋರಿರುತ್ತಾರೆ. ಅದನ್ನು ಅನುಸರಿಸಿ ಅರ್ಜಿದಾರರು ಪ್ರತ್ಯರ್ಜಿದಾರ ಸಂಖ್ಯೆ:2 ನ್ನು ಭೇಟಿ ಮಾಡಿರುತ್ತಾರೆ. ಆದರೆ ಅವರು ಅರ್ಜಿದಾರರ ಕ್ಲೇಮನ್ನು ನಿರಾಕರಿಸಿರುತ್ತಾರೆ.

ಅಧಿನಿಯಮದ 44(2)ನೇ ಉಪಬಂಧದ ಅನುಸಾರ ಹಾಗೂ *ಮಫತ್‌ಲಾಲ್ ಇಂಡಸ್ಟ್ರೀಸ್ ಲಿ. -ವಿರುದ್ಧ- ಭಾರತ ಒಕ್ಕೂಟ* ತೀರ್ಪನ್ನು ಉದ್ಧರಿಸುವ ಮೂಲಕ ಈ *(1997) 5 ಎಸ್‌ಸಿಸಿ 536* ನ್ಯಾಯಾಲಯವು ಅನುಬಂಧ-ಜಿ ಯಲ್ಲಿನ ಪ್ರಶ್ನಿತ ಆದೇಶ/ಹಿಂಬರಹವನ್ನು ರದ್ದುಪಡಿಸಿದ್ದು, ತರುವಾಯ ಪ್ರತ್ಯರ್ಜಿದಾರ ಸಂಖ್ಯೆ:2 ರಿಂದ 4 ರವರುಗಳಿಗೆ ಅರ್ಜಿದಾರರು ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ವಾಸ್ತವಿಕವಾಗಿ ಹಣ ಸಂದಾಯ ಮಾಡುವ ದಿನಾಂಕದವರೆಗೂ ವಾರ್ಷಿಕ ಶೇ.6ರ ದರದಲ್ಲಿನ ಬಡ್ಡಿಯೊಂದಿಗೆ ಅರ್ಜಿದಾರರಿಗೆ 10,11,810/- ರೂ.ಗಳ ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ಹಿಂದಿರುಗಿಸಲು ನಿರ್ದೇಶಿಸಲಾಗಿರುತ್ತದೆ.

ರಿಟ್ ಅರ್ಜಿಯನ್ನು ಅಂಗೀಕರಿಸಲಾಗಿರುತ್ತದೆ.

*ಉಲ್ಲೇಖಿಸಲಾದ ಮೊಕದ್ದಮೆ* — *ಪ್ಯಾರಾದಲ್ಲಿ*

1. *(1997) 5 ಎಸ್‌ಸಿಸಿ 536*
*ಮಫತ್‌ಲಾಲ್ ಇಂಡಸ್ಟ್ರೀಸ್ ಲಿ.*
*-ವಿರುದ್ಧ - ಭಾರತ ಒಕ್ಕೂಟ* — *(ಉಲ್ಲೇ) 9*

ಅರ್ಜಿದಾರರ ಪರ: ಶ್ರೀ ಅಮಿತ್ ಕುಮಾರ್ ದೇಶಪಾಂಡೆ ಇವರ ಪರವಾಗಿ ವೆಂಕಟೇಶ್ ಸಿ. ಮಲ್ಲಬಾಡಿ, ವಕೀಲರು.

ಪ್ರತ್ಯರ್ಜಿದಾರರ ಪರ: ಶ್ರೀ ಎ. ಸೈಯದ್ ಹಬೀಬ್, ಎಜಿಎ.

**ಆಜ್ಞೆ**

**ನ್ಯಾಯಮೂರ್ತಿ ಶ್ರೀಮತಿ ಎಸ್. ಸುಜಾತಾ:**

ಅರ್ಜಿದಾರರು, ಕಡತ ಸಂಖ್ಯೆ: ಎಸ್‌ಟಿಪಿ/153/2012–13 (ರಿಟ್ ಅರ್ಜಿಗೆ ಅನುಬಂಧ–ಜಿ ಯಲ್ಲಿರುವಂಥ ಪ್ರತಿ)ರಲ್ಲಿ ಪ್ರತ್ಯರ್ಜಿದಾರ ಸಂಖ್ಯೆ:2 ದಿನಾಂಕ 24.8.2013 ರಂದು ಹೊರಡಿಸಿದ ಆದೇಶ/ಹಿಂಬರಹವನ್ನು ಪ್ರಶ್ನಿಸುವುದರೊಂದಿಗೆ, ಹೆಚ್ಚುವರಿ ಮುದ್ರಾಂಕ ಶುಲ್ಕ ಸ್ವೀಕರಿಸಿದ ದಿನಾಂಕದಿಂದ ವಾಸ್ತವಿಕ ವೇತನದ ದಿನಾಂಕದವರೆಗೆ ವಾರ್ಷಿಕ ಶೇ.6ರ ದರದ ಬಡ್ಡಿಯೊಂದಿಗೆ 10,11,810/– ರೂ.ಗಳ ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ಹಿಂದಕ್ಕೆ ಪಡೆಯಲು 2ರಿಂದ 4ರ ವರೆಗಿನ ಪ್ರತ್ಯರ್ಜಿದಾರರಿಗೆ ನಿರ್ದೇಶನವನ್ನು ನೀಡುವಂತೆ ಕೋರಿರುತ್ತಾರೆ.

2. ಅರ್ಜಿದಾರ ಕಂಪನಿಯು, ಭಾರತೀಯ ಕಂಪನಿಗಳ ಅಧಿನಿಯಮ, 1956ರಡಿಯಲ್ಲಿ ನೋಂದಾಯಿತವಾಗಿರುವ ಸಾರ್ವಜನಿಕ ನಿಯಮಿತ ಕಂಪನಿಯಾಗಿರುತ್ತದೆ. 4ನೇ ಪ್ರತ್ಯರ್ಜಿದಾರ ಕಚೇರಿಯಲ್ಲಿ 2012ರ ಜೂನ್ 11 ರಿಂದ ಸೆಪ್ಟೆಂಬರ್ 5ರ ವರೆಗಿನ ಅವಧಿಯಲ್ಲಿ ಸಾಕಷ್ಟು ಜಮೀನುಗಳನ್ನು ಅರ್ಜಿದಾರ ಕಂಪನಿಯು ನೋಂದಣಿ ಮಾಡಿಸಿಕೊಂಡಿದ್ದು, ಮುದ್ರಾಂಕ ಶುಲ್ಕವನ್ನು ಹೆಚ್ಚುವರಿಯಾಗಿ ಸಂದಾಯ ಮಾಡಲಾಗಿರುತ್ತದೆ. ಹಾಗಾಗಿ, ಪ್ರತ್ಯರ್ಜಿದಾರರು ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ಹಿಂದಕ್ಕೆ ಪಡೆಯಲು ಕೋರಿರುತ್ತಾರೆ. ಇದನ್ನು ಪ್ರತ್ಯರ್ಜಿದಾರರು ತಿರಸ್ಕರಿಸಿದ್ದಾರೆ. ಹಾಗಾಗಿ, ಈ ರಿಟ್ ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ.

3. ಅರ್ಜಿದಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳಾದ ಶ್ರೀ ವೆಂಕಟೇಶ್ ಸಿ. ಮಲ್ಲಬಾಡಿಯವರು, ಇಲ್ಲಿನ ಪ್ರಶ್ನಿತ ಆದೇಶವು ಅಧಿಕಾರ ವ್ಯಾಪ್ತಿಯ ಪೇಟೆಂಟ್ ದೋಷದಿಂದ ಬಾಧಿತವಾಗಿದ್ದು, ಇದು ಸ್ವಾಭಾವಿಕ ನ್ಯಾಯದ ತತ್ವಗಳಿಗೆ ವಿರುದ್ಧವಾದುದಾಗಿರುತ್ತದೆ ಎಂದು ನಿವೇದಿಸಿಕೊಂಡಿರುತ್ತಾರೆ. ಕರ್ನಾಟಕ ಮುದ್ರಾಂಕ ಅಧಿನಿಯಮ, 1957 (ಇನ್ನು ಮುಂದೆ ಸಂಕ್ಷಿಪ್ತತೆಗಾಗಿ 'ಅಧಿನಿಯಮ' ಎಂದು

ಉಲ್ಲೇಖಿಸಲಾಗಿರುತ್ತದೆ)ರ 44ನೇ ಪ್ರಕರಣದಡಿಯಲ್ಲಿ ಅಧಿಕಾರ ಚಲಾಯಿಸಲು ಪ್ರತ್ಯರ್ಜಿದಾರ ಸಂಖ್ಯೆ:2 ಅರೆ ನ್ಯಾಯಿಕ ಪ್ರಾಧಿಕಾರವಾಗಿರುವುದರಿಂದ, ಅರ್ಜಿದಾರ ಕಂಪನಿಗೆ ತನ್ನ ವಾದವನ್ನು ಮಂಡಿಸಲು ಸಾಕಷ್ಟು ಅವಕಾಶವನ್ನು ನೀಡದೆ ಹಿಂಬರಹದ ರೂಪದಲ್ಲಿ ಆದೇಶವನ್ನು ನೀಡಿರುವುದು ಸಂಪೂರ್ಣವಾಗಿ ವ್ಯತಿರಿಕ್ತವಾದುದು ಹಾಗೂ ಕಾನೂನು ಬಾಹಿರವಾದುದೆಂದೂ ನಿವೇದಿಸಿಕೊಂಡಿರುತ್ತಾರೆ. ಮಾನ್ಯ ನ್ಯಾಯವಾದಿಗಳು, ಪ್ರತ್ಯರ್ಜಿದಾರ ಸಂಖ್ಯೆ:2 ಮಾಡಿರುವ ಅಧಿನಿಯಮದ 44ನೇ ಪ್ರಕರಣದ ಅರ್ಥ ವಿವರಣೆಯು ಕಾನೂನಿನ ಅರ್ಥವಿವರಣೆಗೆ ವಿರುದ್ಧವಾದುದಾಗಿದೆಯೆಂದೂ ನಿವೇದಿಸಿಕೊಂಡಿರುತ್ತಾರೆ. ಮಾನ್ಯ ನ್ಯಾಯವಾದಿಗಳ ಪ್ರಕಾರ, ಎರಡು ಸಂದರ್ಭಗಳಲ್ಲಿ ಸಂದಾಯ ಮಾಡಿರುವ ಹೆಚ್ಚುವರಿ ಶುಲ್ಕವನ್ನು ಹಿಂದಕ್ಕೆ ಪಡೆಯಬಹುದಾಗಿರುತ್ತದೆ. ಒಂದು, ಲಿಖಿತದ ನೋಂದಣಿಯ ದಿನಾಂಕದಂದು ಸಂದಾಯ ಮಾಡಿದ ಹೆಚ್ಚುವರಿ ಮೊಬಲಗನ್ನು ಪಡೆಯುವುದಾದರೆ, ಮತ್ತೊಂದು ಮುದ್ರಾಂಕ ಶುಲ್ಕವನ್ನು ವಿಧಿಸುವ ಆದೇಶದ ಮೇಲೆ ಸಂದಾಯ ಮಾಡಿದ ಹೆಚ್ಚುವರಿ ಮೊಬಲಗನ್ನು ಪಡೆಯುವುದಾಗಿರುತ್ತದೆಯೆಂದು ನಿವೇದಿಸಿಕೊಂಡಿರುತ್ತಾರೆ. ಮಾನ್ಯ ನ್ಯಾಯವಾದಿಗಳು ಪ್ರತ್ಯರ್ಜಿದಾರ ಸಂಖ್ಯೆ:2 ರೂಪಿಸಿರುವ ಅವರ ಅರ್ಥವಿವರಣೆಯಲ್ಲಿ, ಕಾನೂನಿನ ಮೂಲಕ ಅಧಿಕೃತಗೊಳಿಸಲು ಹೆಚ್ಚುವರಿಯಾಗಿ ಮುದ್ರಾಂಕ ಶುಲ್ಕವನ್ನು ಸ್ವೀಕರಿಸುವುದಕ್ಕೆ ಅಥವಾ ಒಪ್ಪಿಕೊಳ್ಳುವುದಕ್ಕೆ ಇದು ಕಾರಣವಾಗುವುದರಿಂದ ಈ ಉಪಬಂಧವು ಅಸಂವಿಧಾನಾತ್ಮಕವಾಗಿದೆ ಹಾಗೂ ಅರ್ಜಿದಾರರು ಸಂದಾಯ ಮಾಡಿದ ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ಉಳಿಸಿಕೊಳ್ಳಲು ಯಾವುದೇ ಉಪಬಂಧ ಇರುವುದಿಲ್ಲವೆಂದು ವಾದಿಸಿರುತ್ತಾರೆ.

4. ಪ್ರತ್ಯರ್ಜಿದಾರರ ಪರ ಹಾಜರಾದ ಮಾನ್ಯ ಹೆಚ್ಚುವರಿ ಸರ್ಕಾರಿ ನ್ಯಾಯವಾದಿಗಳಾದ ಶ್ರೀ ಸಯ್ಯದ್ ಹಬೀಬ್‌ರವರು ಪ್ರತ್ಯರ್ಜಿದಾರ ಸಂಖ್ಯೆ:2 ರವರು ಮಾಡಿದ ಅಧಿನಿಯಮದ 44ನೇ ಪ್ರಕರಣದ ಅರ್ಥ ವಿವರಣೆಯು ಸಮರ್ಥನೀಯವಾಗಿದೆಯೆಂದು ವಾದಿಸಿ ಪ್ರಶ್ನಿತ ಆದೇಶವನ್ನು ಸಮರ್ಥಿಸುವುದಕ್ಕೆ ಪ್ರಯತ್ನಿಸಿರುತ್ತಾರೆ. ಹೆಚ್ಚುವರಿಯಾಗಿ ಯಾವುದೇ ಮುದ್ರಾಂಕ ಶುಲ್ಕದ ಮರುಪಾವತಿ

ಸಂದಾಯ ಮಾಡದಿರುವುದು ಅಧಿನಿಯಮದ 44ನೇ ಪ್ರಕರಣದ ನಿಬಂಧನೆಗಳಲ್ಲಿ ಬದ್ಧವಾಗಿರತಕ್ಕದ್ದಾಗಿದೆ.

5. ಪಕ್ಷಕಾರರ ಪರ ಹಾಜರಾದ ಮಾನ್ಯ ನ್ಯಾಯವಾದಿಗಳ ವಾದವನ್ನು ಆಲಿಸಿರುತ್ತೇವೆ ಹಾಗೂ ದಾಖಲೆಯಲ್ಲಿರುವ ವಸ್ತು ವಿಷಯವನ್ನು ಪರಿಶೀಲಿಸಲಾಗಿರುತ್ತದೆ.

6. ಹಸ್ತಾಂತರಣ ಮಾಡಿದ ದಿನಾಂಕದಿಂದ ಅಧಿನಿಯಮದಡಿಯಲ್ಲಿ ಸಂದಾಯ ಮಾಡಬೇಕೆಂದು ಅಗತ್ಯಪಡಿಸಿದ ಮುದ್ರಾಂಕ ಶುಲ್ಕವು ಶೇ.5.8ರ ದರದಲ್ಲಿತ್ತು. ಮುದ್ರಾಂಕ ಶುಲ್ಕದ ಸದರಿ ಶೇಕಡಾವಾರು ದರವು ದಿನಾಂಕ: 13.3.2012ರಂದಿನ ರಾಜ್ಯಪತ್ರದ ಅಧಿಸೂಚನೆಯಿಂದ 2012ರ ಏಪ್ರಿಲ್ 1 ರಿಂದ ಜಾರಿಗೆ ಬಂದಿರುತ್ತದೆ. ರಾಜ್ಯಪತ್ರ ಅಧಿಸೂಚನೆಯ ಪ್ರಕಟಣೆಗೆ ಮೊದಲು ಸಂದಾಯ ಮಾಡಬೇಕೆಂದು ಅಗತ್ಯಪಡಿಸಿದ ಮುದ್ರಾಂಕ ಶುಲ್ಕವು ಶೇ.6.8ರ ದರದಲ್ಲಿತ್ತು. ದಿನಾಂಕ 13.3.2012ರಂದಿನ ರಾಜ್ಯಪತ್ರದ ಅಧಿಸೂಚನೆಯಡಿಲ್ಲಿ ಮುದ್ರಾಂಕ ಶುಲ್ಕವನ್ನು ಕಡಿತಗೊಳಿಸಿರುವುದನ್ನು ಗಮನಿಸದೆ, ಮುದ್ರಾಂಕ ಶುಲ್ಕದ ದರಗಳನ್ನು ಇಳಿತಾಯಗೊಳಿಸಿದ ತರುವಾಯ ಕಾರ್ಯರೂಪಕ್ಕೆ ಬಂದ 30 ಕ್ರಯ ಪತ್ರಗಳ ಮೇಲೆ ಶೇ.6.8ರ ದರದಲ್ಲಿ ಶುಲ್ಕವನ್ನು ಸಂದಾಯ ಮಾಡಲಾಗಿರುತ್ತದೆಯೆಂಬುದು ಅರ್ಜಿದಾರರ ವಾದವಾಗಿರುತ್ತದೆ. ಕ್ರಯಪತ್ರಗಳನ್ನು 2012ರ ಜೂನ್ 11 ರಿಂದ ಸೆಪ್ಟೆಂಬರ್ 12ರ ವರೆಗೆ ನೋಂದಾಯಿಸಲಾಗಿರುತ್ತದೆ. ಅಕಸ್ಮಾತಾಗಿ, ಕಾನೂನುಬದ್ಧವಾಗಿ ಸಂದಾಯ ಮಾಡಬೇಕಾಗಿದ್ದ ಮುದ್ರಾಂಕ ಶುಲ್ಕಕ್ಕಿಂತ ಹೆಚ್ಚಿನ ಮುದ್ರಾಂಕ ಶುಲ್ಕವನ್ನು ಸಂದಾಯ ಮಾಡಿರುವ ಅರ್ಜಿದಾರನು, ತಿಳಿಯದೆ ಸಂದಾಯ ಮಾಡಿರುವ ಹೆಚ್ಚುವರಿ ಮುದ್ರಾಂಕ ಶುಲ್ಕದ ಮೊಬಲಗನ್ನು ಹಿಂದಿರುಗಿಸುವಂತೆ ಕ್ಲೇಮು ಮಾಡಿ ಪ್ರತ್ಯರ್ಜಿದಾರ ಸಂಖ್ಯೆ: 4 ಕ್ಕೆ 2012ರ ಅಕ್ಟೋಬರ್ 5 ರಂದು ಒಂದು ಮನವಿಯನ್ನು ನೀಡಿರುತ್ತಾನೆ.

7. 10,11,810/–ರೂ.ಗಳ ವರೆಗೆ ಅರ್ಜಿದಾರರು ಸಂದಾಯ ಮಾಡಿದ ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ಒಪ್ಪಿಕೊಂಡು ಪ್ರತ್ಯರ್ಜಿದಾರ ಸಂಖ್ಯೆ:4, ದಿನಾಂಕ: 12.10.2012ರಂದು ಅರ್ಜಿದಾರರಿಗೆ ಪತ್ರ ಬರೆದು, ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರ ಅಂದರೆ ಇಲ್ಲಿನ ಪ್ರತ್ಯರ್ಜಿದಾರ ಸಂಖ್ಯೆ 2ರಲ್ಲಿ ಪೂರ್ವ ಮಂಜೂರಾತಿಯ ಪಡೆದ ನಂತರವಷ್ಟೇ ಹಣ ಹಿಂದಿರುಗಿಸಲು ಸಾಧ್ಯವೆಂದು ತಿಳಿಸಿ, ಅರ್ಜಿದಾರರಿಗೆ ಈ ಸಂಬಂಧದಲ್ಲಿನ ಆವಶ್ಯಕ ಕಾರ್ಯವಿಧಾನಕ್ಕೆ ಬೆಂಗಳೂರಿನಲ್ಲಿರುವ ಕೇಂದ್ರ ಕಚೇರಿಯನ್ನು ಸಂಪರ್ಕಿಸಲು ಕೋರಿರುತ್ತಾರೆ. ಅದನ್ನು ಅನುಸರಿಸಿ ಅರ್ಜಿದಾರರು ಪ್ರತ್ಯರ್ಜಿದಾರ ಸಂಖ್ಯೆ:2 ನ್ನು ಭೇಟಿ ಮಾಡಿರುತ್ತಾರೆ. ಆದರೆ ಅವರು ಅರ್ಜಿದಾರರ ಕ್ಲೇಮನ್ನು ನಿರಾಕರಿಸಿರುತ್ತಾರೆ.

8. ಈ ಹಿನ್ನೆಲೆಯಲ್ಲಿ, ಅಧಿನಿಯಮದ 44 (2)ನೇ ಪ್ರಕರಣವನ್ನು ಉಲ್ಲೇಖಿಸುವುದು ಪ್ರಯೋಜನಕಾರಿಯಾಗಿರುತ್ತದೆ ಅದು ಈ ಮುಂದಿನಂತಿರುತ್ತದೆ:

> *(2) ಮುಖ್ಯ ನಿಯಂತ್ರಣಾ ರಾಜಸ್ವ ಪ್ರಾಧಿಕಾರದ ಅಭಿಪ್ರಾಯದಲ್ಲಿ, ಮುದ್ರಾಂಕ ಶುಲ್ಕವನ್ನು ಕಾನೂನುಬದ್ಧವಾಗಿ ವಿಧಿಸಬಹುದಾದುದಕ್ಕಿಂತ ಹೆಚ್ಚಿಗೆ ವಿಧಿಸಿದ್ದು, ಈ ಅಧಿನಿಯಮದ ಯಾವುದೇ ಉಪಬಂಧದಡಿಯಲ್ಲಿ ಸಂದಾಯ ಮಾಡಿದ್ದಲ್ಲಿ, ಅಂಥ ಪ್ರಾಧಿಕಾರವು, ಲಿಖಿತ ಪತ್ರದ ಅಥವಾ ಅದನ್ನು ವಿಧಿಸುವ ಆದೇಶದ ನೋಂದಣಿಯ/ ದಿನಾಂಕದಿಂದ ಆರು ತಿಂಗಳೊಳಗೆ ಲಿಖಿತದಲ್ಲಿ ಸಲ್ಲಿಸಿದ ಅರ್ಜಿಯ ಮೇಲೆ ಹೆಚ್ಚುವರಿ ಹಣವನ್ನು ಹಿಂದಿರುಗಿಸಬಹುದಾಗಿರುತ್ತದೆ.*
>
> *[ಪರಂತು, ರಾಜ್ಯ ಸರ್ಕಾರದ ಮಂಜೂರಾತಿಯೊಂದಿಗೆ, ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರವು ಉಪ–ಪ್ರಕರಣ (1) ಅಥವಾ (2)ರಲ್ಲಿ ನಿರ್ದಿಷ್ಟಪಡಿಸಿದ ಅವಧಿಯ ತರುವಾಯ ಹಿಂದಿರುಗಿಸಬಹುದಾಗಿರುತ್ತದೆ.]*

9. ***ಮಫತ್‌ಲಾಲ್ ಇಂಡಸ್ಟ್ರೀಸ್ ಲಿ. –ವಿರುದ್ಧ – ಭಾರತ ಒಕ್ಕೂಟ***[1], ಪ್ರಕರಣದಲ್ಲಿ ಸನ್ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಈ ಮುಂದಿನಂತೆ ಅಭಿಪ್ರಾಯಪಟ್ಟಿರುತ್ತದೆ:

> *"ಕಾನೂನುಬಾಹಿರವಾಗಿ ಸಂಗ್ರಹಿಸಿದ ತೆರಿಗೆಯ ವಸೂಲಿಯನ್ನು ನಿಷೇಧಿಸುವಂತೆ ಕಂಡು ಬರುವ ಅಥವಾ ಪ್ರಯತ್ನಿಸುವ ಯಾವುದೇ ಉಪಬಂಧವು ಸಂವಿಧಾನದ 265ನೇ ಅನುಚ್ಛೇದವನ್ನು ಉಲ್ಲಂಘಿಸುವಂಥದ್ದಾಗಿದ್ದು, ಅದನ್ನು ರದ್ದುಪಡಿಸಲೇ ಬೇಕಾಗಿರುತ್ತದೆ. ಪರಿನಿಯಮದ ಅಡಿಯಲ್ಲಿ ಸಂದಾಯ ಮಾಡಬೇಕಾದ ಮೊಬಲಗಿಗಿಂತ ಹೆಚ್ಚಿನ ಮೊಬಲಗನ್ನು ತೆರಿಗೆದಾರನಿಂದ ಸಂಗ್ರಹಿಸಲಾಗಿದೆಯೆಂಬುದು ಒಮ್ಮೆ ಸುಸ್ಥಾಪಿತವಾದಲ್ಲಿ, ತೆರಿಗೆದಾರನು, ಸ್ವಾಭಾವಿಕವಾಗಿಯೇ, ಇಡೀ ಮೊಬಲಗನ್ನು ಹಿಂದಕ್ಕೆ ಪಡೆಯುವ ಹಕ್ಕನ್ನು ಪಡೆದುಕೊಳ್ಳುತ್ತಾನೆ. ಷರತ್ತುಗಳನ್ನು ವಿಧಿಸುವ ಮೂಲಕ ಹಕ್ಕನ್ನು ಪರಿಣಾಮಕಾರಿಯಾಗಿ ದೂರ ಮಾಡಿದಲ್ಲಿ, ತರುವಾಯ ವಿಧಿಸಿದ ಈ ಷರತ್ತುಗಳನ್ನು, ಕಾನೂನು ದೋಷ ಪೂರ್ಣವಾದವುಗಳೆಂದು ಹಾಗೂ ಸಂವಿಧಾನಕ್ಕೆ ವ್ಯತಿರಿಕ್ತವಾಗಿವೆಯೆಂದು ಘೋಷಿಸ ಬೇಕಾಗುತ್ತದೆ.*
>
> *ಈ ವಿಚಾರಕ್ಕೆ ಮತ್ತೊಂದು ಆಯಾಮವೂ ಇರುತ್ತದೆ. ಕಾರ್ಯ ನಿರ್ವಹಣಾಧಿಕಾರಿಗಳು, ಪರಿನಿಯಮಗಳು ಅನುಮತಿಸಿರುವುದಕ್ಕಿಂತ ಹೆಚ್ಚಿನ ತೆರಿಗೆಯನ್ನು ವಿಧಿಸಬಾರದಾಗಿರುತ್ತದೆ. ವಿಧಿಸಿರುವುದು, ಪರಿನಿಯಮಗಳಲ್ಲಿ ಸೂಚಿಸಿರುವುದಕ್ಕಿಂತ ಹೆಚ್ಚಾದಲ್ಲಿ, ತರುವಾಯ ನಿರೂಪಿಸುವ ಮೂಲಕ ಇದನ್ನು ಉಳಿಸಿಕೊಳ್ಳುವುದು ಕಾನೂನಿನ ಪ್ರಕಾರ ಅನಧಿಕೃತವಾದುದಾಗಿರುತ್ತದೆ. ಉಳಿಸಿಕೊಳ್ಳಬೇಕಾಗಿರುವುದು*

1.(1997) 5 ಎಸ್‌ಸಿಸಿ 536

*ವಿಧಿಸುವ ಪ್ರಕರಣದ ಜಾರಿಯಾಗಿರದೆ ಮತ್ತೇನೋ ಆಗಿರುತ್ತದೆ. ಅಂಥ ಕಾನೂನುಬಾಹಿರವಾಗಿ ಸಂಗ್ರಹಿಸಿದ ತೆರಿಗೆ ಹಣವನ್ನು ರಾಜ್ಯವು ಬಳಸಿಕೊಳ್ಳಬಹುದಾಗಿದ್ದರೂ, ಅದು ರಾಜ್ಯದ ವಿಲೇಯ ಅಧಿಕಾರದೊಳಗಿರುವುದಿಲ್ಲ. ಹಣವನ್ನು ರಾಜ್ಯವು ಬಳಸಿಕೊಳ್ಳಬೇಕಾದಲ್ಲಿ, ರಾಜ್ಯವು, ಹಣವನ್ನು ಸುಪರ್ದಿಗೆ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಕೆಲವು ಕಾನೂನು ಸಮ್ಮತತೆಯನ್ನು ಕಂಡುಕೊಳ್ಳಬೇಕಾಗಿರುತ್ತದೆ.*

*265ನೇ ಅನುಚ್ಛೇದದಡಿಯಲ್ಲಿನ ಸಂರಕ್ಷಣೆಯ ಹಣಕಾಸು ವಿಷಯಗಳಲ್ಲಿ ರಾಜ್ಯದ ಪೀಡನೆಯಿಂದ ನಾಗರಿಕರಿಗೆ ರಕ್ಷಣೆಯನ್ನು ಒದಗಿಸುತ್ತದೆ. 265ನೇ ಅನುಚ್ಛೇದವನ್ನು ಅದು ನಿರೂಪಿತವಾಗಿರುವಂತೆ ಅಕ್ಷರಶಃ ಅನುಷ್ಠಾನಗೊಳಿಸಬೇಕಾಗುತ್ತದೆ ಹಾಗೂ ವಾಸ್ತವಗೊಳಿಸಲು ಹಾಗೂ ಉಳಿಸಿಕೊಳ್ಳಲು ಎಲ್ಲಾ ತೆರಿಗೆ ಕಾನೂನುಗಳನ್ನು ಹಾಗೂ ಎಲ್ಲಾ ಸರ್ಕಾರಿ ಕ್ರಮಗಳನ್ನು ಈ ಖಾತರಿಯ ವಿಚಾರದ ಮೇಲೆ ಪರಿಶೀಲಿಸಬೇಕಾಗುತ್ತದೆ. ನ್ಯಾಯಾಲಯಗಳು, ನಾಗರಿಕರಿಗೆ ಸಂವಿಧಾನದಡಿಯಲ್ಲಿ ನೀಡಿರುವ ಖಾತರಿಗಳನ್ನು ಕುಗ್ಗಿಸುವ ಅಥವಾ ಸರಿಸುವ ಯಾವುದೇ ಪ್ರಯತ್ನದ ವಿರುದ್ಧ ಜಾಗರೂಕತೆಯಿಂದ ಕಾಯುತ್ತಿರುತ್ತವೆ. ಕಾನೂನುಬಾಹಿರವಾಗಿ ವಿಧಿಸಿರುವುದನ್ನು ಉಳಿಸಿಕೊಳ್ಳಲು ಯಾವುದೇ ಕಾನೂನನ್ನು ಹೊರಡಿಸಿದಲ್ಲಿ, ಅದನ್ನು ರದ್ದುಪಡಿಸಲೇ ಬೇಕಾಗಿರುತ್ತದೆ. ತೆರಿಗೆಯನ್ನು ವಿಧಿಸಿರುವುದು ಕಾನೂನು ಬಾಹಿರವಾದುದಾಗಿದೆಯೆಂದು ನ್ಯಾಯವಾದಿಗಳು ತೀರ್ಮಾನಿಸಿದಲ್ಲಿ, ನ್ಯಾಯಾಲಯವು, ತೆರಿಗೆಯನ್ನು ಹಿಂತಿರುಗಿಸಲು ಸರ್ಕಾರಕ್ಕೆ ನಿರ್ದೇಶಿಸುತ್ತದೆ. ಕಾನೂನು ಬಾಹಿರವಾಗಿ ವಿಧಿಸಿದ ತೆರಿಗೆಯನ್ನು ಸಂದಾಯ ಮಾಡಿದ ತರುವಾಯ ಹೇಗೆ ತೆರಿಗೆದಾರನು*

*ತನ್ನ ವ್ಯವಹಾರಗಳನ್ನು ನಿರ್ವಹಿಸಿರುತ್ತಾನೆಂದು ವಿಚಾರಣೆ ಮಾಡುವುದು ನ್ಯಾಯಾಲಯದ ಕೆಲಸವಲ್ಲ. ನ್ಯಾಯಾಲಯವು, 265ನೇ ಅನುಚ್ಛೇದದ ಭಾಷೆಯನ್ನು ತಿರುಚುವ ಅಥವಾ ಯಾವುದೇ ಇತರ ಸಾಧನಗಳ ಮೂಲಕ, ಸಹಜವಾಗಿ ಹೊಂದಿಕೊಳ್ಳದಂಥ ಅರ್ಥವನ್ನು ನೀಡಿರುವಂತೆ ಅರ್ಥೈಸತಕ್ಕದ್ದಲ್ಲ".*

10. ಸದರಿ ತೀರ್ಪಿನ ಹಿನ್ನೆಲೆಯಲ್ಲಿ, ಕಾನೂನಿನ ಮೂಲಕ ಅಧಿಕೃತಗೊಳಿಸಿರುವುದಕ್ಕಿಂತ ಹೆಚ್ಚಿನ ಶುಲ್ಕವನ್ನು ವಸೂಲಿ ಮಾಡುವುದು ಅಥವಾ ಒಪ್ಪಿಕೊಳ್ಳುವುದು ಭಾರತ ಸಂವಿಧಾನದ 265ನೇ ಅನುಚ್ಛೇದದ ನಿರೂಪಣೆಗೆ ವಿರುದ್ಧವಾದುದಾಗಿರುವುದರಿಂದ ಯಾವುದೇ ಕಾನೂನು ಬಾಹಿರ ಸಮರ್ಥನೆಗಳನ್ನು ಪುಷ್ಟೀಕರಿಸಲಾಗುವುದಿಲ್ಲವೆಂದು ಹೇಳಬೇಕಾಗುತ್ತದೆ. ವಿಧಿಸಬಹುದೆಂದು ನಿರ್ದಿಷ್ಟಪಡಿಸಿರುವುದಕ್ಕಿಂತ ಹೆಚ್ಚಿನ ಮೊಬಲಗನ್ನು ಸ್ವೀಕರಿಸಿರುವುದಿಲ್ಲವೆಂದು ಪ್ರಾಧಿಕಾರಗಳು ಹೇಳಬಹುದಾಗಿರುತ್ತದೆ. ಇದನ್ನು, ಸಂಪೂರ್ಣವಾಗಿ ಅನೂರ್ಜಿತವಾಗಬಹುದಾದ ಕಾನೂನಿನ ಪ್ರಾಧಿಕಾರವಿಲ್ಲದೆ ಸಂಗ್ರಹಿಸಿದ ಮೊಬಲಗೆಂದು ಅರ್ಥೈಸಿಕೊಳ್ಳಬಹುದಾಗಿರುತ್ತದೆ. ಶುಲ್ಕ ವಿಧಿಸಲಾಗುತ್ತಿರುವ ಅರ್ಜಿದಾರರ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಅರ್ಜಿದಾರರು ಶೇ.1 ರ ವರೆಗೆ ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ಸಂದಾಯ ಮಾಡಿರುತ್ತಾರೆಂಬುದು ಹಾಗೂ ಸದರಿ ಹೆಚ್ಚುವರಿ ಮೊಬಲಗನ್ನು ತಾವು ಇಟ್ಟುಕೊಳ್ಳಬಾರದೆಂಬುದು ಒಪ್ಪಿಕೊಂಡ ವಿಷಯವಾಗಿದ್ದು, ಅಧಿನಿಯಮದ 44(2) ಪ್ರಕರಣದಡಿಯಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಹೆಚ್ಚುವರಿ ಮೊಬಲಗನ್ನು ಹಿಂದಿರುಗಿಸುವುದಕ್ಕೆ ಸಂಬಂಧಿಸಿದಂತೆ ಅರ್ಜಿದಾರರು ಅರ್ಜಿಯನ್ನು ಸಲ್ಲಿಸಿದ್ದರೂ ಸಹ ಅದನ್ನು ಹಿಂದಿರುಗಿಸಿರುವುದಿಲ್ಲ. ಪ್ರಾಧಿಕಾರಿಗಳು ಅಧಿನಿಯಮದ 44ನೇ ಪ್ರಕರಣದ ನಿಬಂಧನೆಗಳಲ್ಲಿ ಸಂಗ್ರಹಿಸಿದ ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ಹಿಂದಿರುಗಿಸಲು ಬದ್ಧರಾಗಿರುತ್ತಾರೆ.

11. ಹಾಗಾಗಿ, ಅನುಬಂಧ–ಜಿ ಯಲ್ಲಿನ ಪ್ರಶ್ನಿತ ಆದೇಶ/ಹಿಂಬರಹವನ್ನು ರದ್ದುಪಡಿಸಿದ್ದು, ತರುವಾಯ ಪ್ರತ್ಯರ್ಜಿದಾರ ಸಂಖ್ಯೆ:2 ರಿಂದ 4 ರವರುಗಳಿಗೆ ಅರ್ಜಿದಾರರು ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ವಾಸ್ತವಿಕವಾಗಿ ಹಣ ಸಂದಾಯ ಮಾಡುವ ದಿನಾಂಕದವರೆಗೂ ವಾರ್ಷಿಕ ಶೇ.6ರ ದರದಲ್ಲಿನ ಬಡ್ಡಿಯೊಂದಿಗೆ ಅರ್ಜಿದಾರರಿಗೆ 10,11,810/– ರೂ.ಗಳ ಹೆಚ್ಚುವರಿ ಮುದ್ರಾಂಕ ಶುಲ್ಕವನ್ನು ಹಿಂದಿರುಗಿಸಲು ನಿರ್ದೇಶಿಸಲಾಗಿರುತ್ತದೆ.